ಮೇ 11-17.1986 ರೂ. 2-00

ತರಂಗ



ಹಿಂದೂ ಸ್ತ್ರೀ ಎಷ್ಟು ಸ್ವತಂತ್ರಳು?

ಸಮುದ್ರ ಸ್ನಾನ - ಮೃತ್ಯುವಿಗೆ ಆಹ್ವಾನ



ಸಿಪ್...ಸಿಪ್...ಹುರ್ರೇ!
ಇದೀಗ ಬಂದಿದೆ!
Dippy's Sipp
Soft Drink Concentrate
ಬಾಯಿ ನೀರೂರಿಸುವ ಆಕರ್ಷಕ ರುಚಿಯ
ಅನುಭವ. ಅತ್ಯುತ್ತಮ
ಗುಣಮಟ್ಟದ ಆಹಾರ ಪದಾರ್ಥಗಳ
ತಯಾರಕರಾದ ಡಿಪ್ಪಿಯವರ ಕೊಡುಗೆ.
ಒಂದು ಪ್ಯಾಕ್ ಡಿಪ್ಪೀಸ್ ಸಿಪ್‌ನಿಂದ
ಎರಡು ಸೀಸೆ ಸಿರಪ್ ಲಭ್ಯ. ಇದರಿಂದ
32 ಲೋಟ ಪಾನೀಯ ತಯಾರು. ಅಂದರೆ
ಪ್ರತಿಯೊಬ್ಬರಿಗೂ ಸಾಕಾಗುವಷ್ಟು!
ಆಯ್ಕೆಗಾಗಿ ಆರು ವಿವಿಧ ರುಚಿಗಳು—
ಆರೆಂಜ್, ಲೆಮನ್, ಪೈನಾಪಲ್, ರೋಸ್,
ಮ್ಯಾಂಗೊ ಮತ್ತು ಕಾಲಾ-ಕಟ್ಟ.
ಹೊಸ ಡಿಪ್ಪೀಸ್ ಸಿಪ್. ಸಾಂದ್ರೀಕರಿಸಿದ
ಲಘುಪಾನೀಯಗಳಲ್ಲೇ ಅತಿ ರುಚಿಕರವಾದದ್ದು!
Dippy's Sipp
Soft drink concentrate
Orange
Artificially coloured and flavoured
ಹನಿ ಹನಿಗೂ ರುಚಿ ಹೆಚ್ಚಿಸುವ ಸಿಪ್!
LINTAS HSDSP 2272 1.KN

ಸ್ಥಿತಿ-ಗತಿ

ಸಮುದ್ರ ಸ್ನಾನ- ಮೃತ್ಯುವಿಗೆ ಆಹ್ವಾನ

ಚಿತ್ರ - ಲೇಖನ :
ಎಸ್. ಸಿ. ದೇಸಾಯಿ

ಈಜು ತಿಳಿಯದವರು ಸಮುದ್ರ ಸ್ನಾನಕ್ಕೆ ಇಳಿಯುವುದು, ಈಜು ತಿಳಿದವರು ಹುಚ್ಚು ಧೈರ್ಯದಿಂದ ನೀರಿನಲ್ಲಿ ಮುಸ್ನುಗ್ಗಿ ಸಾಗುವುದು ಎಲ್ಲರಲ್ಲೂ ಕಾಣಬಹುದಾದ ಒಂದು ಸಾಮಾನ್ಯ ಪ್ರವೃತ್ತಿ.

ಇದೇ ನೀರು ಜೀವಕ್ಕೆ ಅಪಾಯ ತಂದಾಗ, ಮೃತ್ಯುವಿನ ಗಂಟೆ ಬಾರಿಸಿದಾಗ ಯಾರು ಕಾಯಬೇಕು? ಜೀವ ಉಳಿಸಿಕೊಂಡು ದಡ ಸೇರುವುದು ಹೇಗೆ? ವರ್ಷದಿಂದ ವರ್ಷಕ್ಕೆ ಸಮುದ್ರಕ್ಕೆ ಬಲಿಯಾಗಿ ಅಸು ನೀಗುವವರ ಸಂಖ್ಯೆ ಹೆಚ್ಚುತ್ತಿದೆ. ಈ ಅಪಾಯದಿಂದ ಪಾರಾಗಲು ವಹಿಸಬೇಕಾದ ಮುನ್ನೆಚ್ಚರಿಕೆ ಯಾವುದು?

ಮುಂಬಯಿ ಸಮುದ್ರ ತೀರದಲ್ಲಿ ನೀರಿಗೆ ಇಳಿದು ಜೀವ ಕಳೆದುಕೊಳ್ಳುವವರ ಸಂಖ್ಯೆ ಅತೀ ಹೆಚ್ಚು. ಈ ಅಪಾಯದಿಂದ ಜನರನ್ನು ರಕ್ಷಿಸಲು ಅಲ್ಲಿ ರಕ್ಷಕ ಭಟರನ್ನು ಸರಕಾರ ನಿಯಮಿಸಿದೆ. ಆದರೆ ಈ ರಕ್ಷಕ ಭಟರ ಜೀವರಕ್ಷಣೆಗೆ ಎಷ್ಟು ರಕ್ಷಣೆ ಒದಗಿಸಿದೆ?

ಹನ್ನೆರಡು ವರ್ಷಗಳ ಹಿಂದಿನ ಮಾತು. ನನ್ನ ಹಿರಿಯ ಮಗ, ತನ್ನ 24ನೆಯ ವಯಸ್ಸಿನಲ್ಲಿ, ಮುಂಬೈನಲ್ಲಿ ರೈಲು ಅಪಘಾತಕ್ಕೀಡಾಗಿ ಸಾವನ್ನಪ್ಪಿದ. ತಾಂತ್ರಿಕ ವಿಷಯದೊಂದಿಗೆ ಎಸ್.ಎಸ್.ಸಿ. ಮುಗಿಸಿ ಮುಂದೆ ಪತ್ರಿಕೋದ್ಯಮ, ಮುದ್ರಣತಂತ್ರ, ಜಾಹೀರಾತು ಹಾಗೂ ಜನಸಂಪರ್ಕಗಳಲ್ಲಿ ಕೂಡ ಪದವಿ ಗಳಿಸಿದ್ದ ಆತನದು ಛಾಯಾಚಿತ್ರದಲ್ಲಿ ವಿಶೇಷ ಆಸಕ್ತಿ. ಅದವನ ಐಚ್ಛಿಕ ವಿಷಯ ಕೂಡ.

ಓದುವಾಗ ಮತ್ತು ಓದು ಮುಗಿದ ಮೇಲೆ ಅಪಾರ ಸ್ನೇಹ ಸಂಪತ್ತು ಹೊಂದಿದ್ದ ಆತನಿಗೆ ಮುಂಬೈಯಲ್ಲಿರುವ ಎಲ್ಲ ಭಾಷೆಯ, ಎಲ್ಲ ರಾಜ್ಯಗಳ ಗೆಳೆಯರು ಇದ್ದರು. ಕೋಮು-ಭಾಷೆ-ಬಣ್ಣಗಳ ಭೇದವರಿಯದ ಆತನ ಸ್ನೇಹ ವಲಯದಲ್ಲಿ ನಾವು ಕೂಡಾ ಒಂದಾಗುತ್ತಿದ್ದೆವು. ಆತನ ಸ್ನೇಹಿತರೆಲ್ಲ ತಮ್ಮ ಕುಟುಂಬದ ಇತರರೊಂದಿಗೆ ನಮ್ಮ ಮನೆಗೂ, ನಾವು ಅವರ ಮನೆಗೂ ಹೋಗುವದು ವಾಡಿಕೆ.

ಇಂಥ ಸ್ನೇಹಿತರಲ್ಲೊಬ್ಬ ಜೋಹರ್ ಬಗದಾಗಿ. ಆತ ಒಬ್ಬ ಮುಸ್ಲಿಂ ಬೋರಿ. ಮೆಕ್ಯಾನಿಕಲ್ ಡ್ರಾಫ್ಟ್‌ಮನ್ ತರಬೇತಿ ಮುಗಿಸಿದ್ದ ಜೋಹರ್ ದುಬಾಯಿಯಲ್ಲಿ ನೌಕರಿ ಪಡೆದ. ಆತ ದುಬಾಯಿಗೆ ಹೋಗುವಾಗ ನನ್ನ ಮಗ ಬಲು ಸಂಭ್ರಮ-ಸಂತೋಷದಿಂದ ಆತನನ್ನು ಬೀಳ್ಕೊಟ್ಟಿದ್ದ. ಆದರೆ ನನ್ನ ಮಗ ದುರಂತಕ್ಕೆ ಬಲಿಯಾದ ದುಃಖ ನಮ್ಮಷ್ಟೇ ಜೋಹರನಿಗೂ ಆಯಿತು.

ಈ ಮಧ್ಯೆ ಜೋಹರನ ಮದುವೆಯೂ ಆಯಿತು. ಮೂರು ಮಕ್ಕಳ ತಂದೆಯೂ ಆದ. ಮೂಲತಃ ರತ್ನಗಿರಿಯ ಕಡೆಯವರಾದ ಜೋಹರನ ಕುಟುಂಬದವರು ಮಾವಿನ ಹಣ್ಣಿನ ಸುಗ್ಗಿಯಲ್ಲಿ 'ಆಪೂಸ್ ಔತಣ'ಕ್ಕೆ ನಮ್ಮನ್ನೆಲ್ಲ ಕರೆಯುತ್ತಿದ್ದುದುಂಟು.

ಜೋಹರ್ ಕುಟುಂಬದ ಹಾಗೇ ನನ್ನ ಗತಿಸಿದ ಮಗನ ಇತರ ಗೆಳೆಯರ ಕುಟುಂಬಗಳವರೊಂದಿಗೂ ನಮ್ಮ ಸ್ನೇಹ ಇನ್ನೂ ಗಾಢವಾಗಿದೆ.

1985ರ ಜನವರಿಯಲ್ಲಿ 15 ದಿನಗಳಿಗೆಂದು ಕರ್ನಾಟಕದ ನನ್ನೂರಿಗೆ ಬಂದೆ. ಆದರೆ ಕಾರ್ಯನಿಮಿತ್ತ ನಾನಿಲ್ಲಿ ಮೂರು ತಿಂಗಳಿಗೂ ಹೆಚ್ಚು ಕಾಲ ಇರಬೇಕಾಯಿತು. ಮುಂಬೈಯಲ್ಲೋ ನನ್ನ ಮೊಮ್ಮಗ (ಮಗಳ ಮಗ)ನ ಉಪನಯನದ ತಯಾರಿ. ನಾನಿಲ್ಲಿದ್ದರೂ ಮನಸ್ಸು ಮಾತ್ರ ಮುಂಬೈಯಲ್ಲೇ. ಅಂತೂ ಎಪ್ರಿಲ್ ತಿಂಗಳಲ್ಲಿ ಹಿಂದಿರುಗಿದೆ. ಉಪನಯನದ ದಿನ ಸಮೀಪಿಸುತ್ತಿದ್ದುದರಿಂದ ನಾವೆಲ್ಲ ಮಗಳ ಮನೆ (ಜುಹೂ ಪಾರ್ಲೆಸ್ಕೀಂ) ಯಲ್ಲಿದ್ದೆವು. ಸಂಭ್ರಮ-ಸಡಗರದಲ್ಲಿದ್ದ ನಮಗೆಲ್ಲ ಎದೆ ಬಿರಿವ ಸುದ್ದಿಯೊಂದು ಬಂತು: "ಜೋಹರ್ ಸಮುದ್ರ ಸ್ನಾನಕ್ಕೆ ಹೋದವ ಮುಳುಗಿ ಸತ್ತ". ಹೇಗೆ? ಎಲ್ಲಿ? ಯಾವಾಗ?

ಅನಾಥ ಬದುಕು

ದುಬಾಯಿಯಿಂದ ರಜೆಯ ಮೇಲೆ ಬಂದಿದ್ದ ಜೋಹರ್ ತನ್ನ ತಾಯಿ, ಪತ್ನಿ, ಮಕ್ಕಳು ಹಾಗೂ ಆಪ್ತರೊಂದಿಗೆ ಮುಂಬೈ ಹತ್ತಿರದ ವಿಹಾರತಾಣವಾದ ಅಲಿಬಾಗಿಗೆ ಹೋದ. ಸಮುದ್ರ ತೀರದ ಬೆಳ್ಳಿ ಉಸುಕಿನ ಮೆದು ಹಾಸಿಗೆ, ತೆಂಗು-ಮಾವುಗಳ ಹಸಿರು ವನ. ಪರದೇಶದಿಂದ ಬಂದವ ಪ್ರತಿ ನಿಮಿಷವನ್ನೂ ತನ್ನ ಕುಟುಂಬದವರೊಂದಿಗೆ, ಗೆಳೆಯರೊಂದಿಗೆ ಆನಂದದಿಂದ ಕಳೆಯಬೇಕೆಂದು ಬಯಸಿದವ... ಅಂತೆಯೇ ಈ ವಿಹಾರ...

"ಸಮುದ್ರದಲ್ಲಿ ಯಾರೂ ಮೀಯುವುದು ಬೇಡ" ಎಂದು ಮೊದಲೇ ನಿಶ್ಚಯಿಸಿಕೊಂಡ ಈ ಪರಿವಾರದ ಜನ ತಿಂದರು-ನಕ್ಕರು-ಓಡಾಡಿದರು... ಮಕ್ಕಳು ಉಸುಕಿನ ಮೇಲೆ ಸೌಧ ನಿರ್ಮಿಸಿದುವು... ಆನಂದದಿಂದ ಹಕ್ಕಿಯಂತೆ ಹಾರಾಡಿದುವು...

ಇನ್ನೇನು ಮನೆಯ ಕಡೆ ಹೊರಡಬೇಕು. ಜೋಹರ್ ಅವರ ಆತುರಕ್ಕೆ ಮಕ್ಕಳೊಂದಿಗೆ ಸುಮ್ಮನೇ ನೀರಿಗಿಳಿದ. ಮೃತ್ಯುವಿಗೆ ಅಷ್ಟೇ ಬೇಕಿತ್ತೇನೋ... ಹುಡುಗರು

ದಡಕ್ಕೆ ಮರಳಿದರು – ಜೋಹರ್ ಬಾರದ ಊರಿಗೆ ತೆರಳಿದ... ಪರಿವಾರದ ಜನ ಕಂಗಾಲಾಗಿ ಕೂಗಿದರು "ಜೋಹರ್..."

ಕೂಗಿಗೆ ಸಿಕ್ಕ ಉತ್ತರ ಜೋಹರನ ಕಳೇಬರ... ಜೋಹರ್ ಮನೆಗೆ ಒಬ್ಬನೇ ಮಗ. ತಂದೆಯನ್ನೂ ಚಿಕ್ಕಂದಿನಲ್ಲೇ ಕಳಕೊಂಡ ದುರ್ದೈವಿ. ಕಡೆಗಾಲದಲ್ಲಿ ಬುದ್ಧಿಮಾಂದ್ಯಕ್ಕೀಡಾದ ಅವರಿಂದ ಕುಟುಂಬಕ್ಕೆ ಮಾನಸಿಕವಾಗಿ – ಆರ್ಥಿಕವಾಗಿ ಎದುರಾದ ತೊಂದರೆಗಳೂ ಅನೇಕ. ಇಂಥದರಲ್ಲಿ ಎದೆಗುಂದದೇ ಇದ್ದೊಬ್ಬ ಮಗನನ್ನು ಬೆಳೆಸಿದ್ದ ಆ ತಾಯಿಗೀಗ ಮಗನ ಆಸರೆಯೂ ತಪ್ಪಬೇಕೆ? ಅರಿಯದ ಕಂದಮ್ಮಗಳು, ಇನ್ನೂ ಇಪ್ಪತ್ತೈದರ ಹರೆಯದ ಹೆಂಡತಿಯನ್ನು ಕೂಡ ಜೋಹರ್ ಅನಾಥಳನ್ನಾಗಿಸಿದ್ದ.

ಸಮುದ್ರಸ್ನಾನಕ್ಕೆ ಹೋಗಿ ಹೀಗೆ ಮರಣಕ್ಕೀಡಾದವರು ಅದೆಷ್ಟೋ. ಮುಂಬೈಯ ಕೆಲ ಉದಾಹರಣೆಗಳನ್ನಿಲ್ಲಿ ಕೊಟ್ಟಿರುವೆ.

ನಾನು ಸೇವೆ ಸಲ್ಲಿಸಿ ನಿವೃತ್ತನಾದ ಸಂಸ್ಥೆಯಲ್ಲಿ ಎಸ್.ಆರ್. ಶಹಾ ಎಂಬವರೊಬ್ಬರು ವಿಭಾಗವೊಂದರ ಮುಖ್ಯ ಇಂಜಿನಿಯರಾಗಿದ್ದರು. ಕ್ಯಾನ್ಸರಿಗೆ ತುತ್ತಾಗಿ ನಡುವಯಸ್ಸಿನಲ್ಲೇ ತೀರಿಹೋದರು. ಅವರ ವಿಧವೆ, ಪುಟ್ಟ ಗಂಡು ಮಕ್ಕಳಿಬ್ಬರನ್ನು ಸಾಕಿ ಬೆಳೆಸಬೇಕಾಯಿತು. ಪತಿ ಬದುಕಿದ್ದಾಗ ಆತ ಸೇವೆ ಸಲ್ಲಿಸುತ್ತಿದ್ದ ಸಂಸ್ಥೆ ನೀಡಿದ್ದ ವಸತಿಗೃಹ ಈಗವಳ ಪಾಲಿಗಿಲ್ಲದಂತಾಯಿತು. ಮುಂಬೈಯಲ್ಲಿ ಏನು ಬೇಕಾದರೂ ಸಿಗುತ್ತದೆ. ಆದರೆ ವಾಸಕ್ಕೊಂದು ಮನೆ ಮಾತ್ರ ಬಹು ವರ್ಷಗಳ ತಪಸ್ಸಿನಿಂದ ದೊರೆವಂಥ ವರವೇ ಸರಿ. ಆ ಸಂಸ್ಥೆಯವರೇ ನಡೆಸುತ್ತಿದ್ದ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಬೇರೆಡೆ ವಾಸಕ್ಕೊಂದು ಮನೆ ಹುಡುಕಿ ಅಂತೂ ಮಕ್ಕಳನ್ನು ಬೆಳೆಸತೊಡಗಿದಳು ಆ ತಾಯಿ.

ಜೈನ ಧರ್ಮಕ್ಕೆ ಸೇರಿದ ಸಂಸ್ಥೆಯೊಂದರ ತರುಣ-ತರುಣಿಯರು ಮುಂಬೈಯ 'ಅಕ್ಷಾ' ಬೀಚಿಗೆ ವಿಹಾರಕ್ಕೆ ಹೋಗಿದ್ದರು. ಈ ತಂಡದಲ್ಲಿ ಶ್ರೀಮತಿ ಶಹಾಳ ಮಕ್ಕಳೂ ಇದ್ದರು. ಸಮುದ್ರ ಸ್ನಾನ ಹಾಗೂ ತೀರದ ಮೇಲೆ ಕುಳಿತು ಆನಂದಿಸುವುದಕ್ಕಾಗಿ ಈ ವಿಹಾರ. ಈಜಲು ಹದಿನೈದು ಜನ ಸಮುದ್ರಕ್ಕಿಳಿದರು. ಆದರೆ ದುರದೃಷ್ಟ. ಸಮುದ್ರದಲ್ಲಿಯೂ 'ತಿರುಗಣಿ ಮಡು' ಗಳಿರುತ್ತವಂತೆ. ಸುಳಿಗೆ ಸಿಕ್ಕ ಮಕ್ಕಳು ಕಕ್ಕಾವಿಕ್ಕಿಯಾದರು. ದಡದಲ್ಲಿ ನಿಂತಿದ್ದ ಈಜು ಬಲ್ಲ ಕೆಲವರು ಸಮುದ್ರಕ್ಕಿಳಿದು ಸಂಕಟ ಪಡುತ್ತಿದ್ದ ಮಕ್ಕಳನ್ನು ಬದುಕಿಸಲು ಯತ್ನಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ದಡಕ್ಕೆ ತಂದರಾದರೂ ಇಬ್ಬರು ಮಾತ್ರ ಕೈಗೆ ಸಿಗದೇ ತೆರೆಗಳೊಂದಿಗೆ ಕೊಚ್ಚಿ ಹೋದರು. ಶ್ರೀಮತಿ ಶಹಾಳ 21ರ ಹರೆಯದ ಎರಡನೆ ಮಗ ವಿನೋದ ಶಹಾ ಹಾಗೂ ಆತನ ಆಪ್ತಳೊಬ್ಬಳು, ವಾಲಚಂದ ನಗರದಿಂದ ಬಂದಿದ್ದ ತರುಣಿ, ಮೃತ್ಯುವಿಗೀಡಾದರು. ಆನಂದ ಪಡಲೆಂದು ವಿಹಾರಕ್ಕೆ ಬಂದಿದ್ದ ತರುಣ-ತರುಣಿಯರ ಮೇಲೆ ವಿಧಿ ಕ್ರೂರ ಪ್ರಹಾರ ಮಾಡಿತ್ತು. ಶ್ರೀಮತಿ ಶಹಾಳಿಗೆ ಗಾಯದ ಮೇಲೆ ಬರೆ!

ಇನ್ನೊಂದು ಬಲಿ

ಮುಂಬೈಯಲ್ಲಿ ಕಲಾವಿದರ ಕಾಲನಿ 'ಕಲಾನಗರ' ದಂತೆಯೇ ಪತ್ರಕರ್ತರ ಕಾಲನಿಯೊಂದಿದೆ – 'ಪತ್ರಕಾರ ನಗರ'. ಪತ್ರಕರ್ತರ ಸಹಕಾರಿ ಗೃಹನಿರ್ಮಾಣ ಸಂಘದಿಂದ ನಿರ್ಮಿಸಿದ ಈ ಕಾಲನಿಯ ನಿವಾಸಿಗಳು ಮತ್ತು ಅವರ ಮಕ್ಕಳಿಗೋಸ್ಕರ ಸಂಘವೇ ಸಂತೋಷಕೂಟ, ವಿಹಾರ, ವಿವಿಧ ಸ್ಪರ್ಧೆಗಳನ್ನೇರ್ಪಡಿಸುವುದುಂಟು.

1981ರ ನವೆಂಬರ್ ತಿಂಗಳಲ್ಲಿ ಈ ಸಂಘ 'ಅಕ್ಷಾ' ಬೀಚಿಗೆ ಒಂದು ವಿಹಾರವನ್ನೇರ್ಪಡಿಸಿತು. ತರುಣರ ಗುಂಪೊಂದು ಬಸ್ಸಿನಲ್ಲಿ ಬೀಚಿಗೆ ಹೋಯಿತು. ಗುಂಪಿನಲ್ಲಿದ್ದ ಕುಮಾರ ಈಶ್ವರನ್ ಹಾಗೂ ಕುಮಾರ ಶ್ರೀರಾಮರಾಜನ್ ಎಂಬಿಬ್ಬರು ತರುಣರು ಸಮುದ್ರಕ್ಕೆ ಬಲಿಯಾದರು. ಸಂತೋಷಕೂಟ ದುಃಖದ ಸಭೆಯಾಗುವಂತಾಯಿತು.

ಈಶ್ವರನ್ ಬೆಂಗಳೂರಿನ ಮೂಲದವರಾದ ನಾಗೇಶ್ವರನ್ ಎಂಬವರ ಮಗ. 'ಟೈಮ್ಸ್ ಬ್ಯೂರೋ'ದ ಮುಖ್ಯಸ್ಥರಾಗಿದ್ದ ನಾಗೇಶ್ವರನ್ ಈಗ 'ಡೇಲಿ'ಯಲ್ಲಿದ್ದಾರೆ. "ಭವಿಷ್ಯ, ಜ್ಯೋತಿಷ್ಯದಲ್ಲಿ ನಂಬಿಕೆ ಇದೆ – ಇಲ್ಲ ಎಂದು ನಾನನ್ನುವುದಿಲ್ಲ. ಆದರೆ ಒಮ್ಮೆ ಲೋಕಲ್ ಗಾಡಿಯಲ್ಲಿ ಬರುವಾಗ ಠಾಣೆ-ಮುಲುಂದಗಳ ನಡುವೆ ಒಬ್ಬ ಸರದಾರಜಿ ನನ್ನ ಮಗ ಈಶ್ವರನನ್ನು ಗಮನಿಸಿ, ಇಳಿದು ಹೋಗುವಾಗ, 'ಬಚ್ಚಾ ಬಹುತ್ ಅಚ್ಛಾ ಹೈ. ಲೇಕಿನ್ ಇಸ್ಕೋ ಕಭೀಭೀ ಪಾನಿ ಔರ್ ಆಗ್ ಕೆ ನಜದೀಕ್ ನ ಬೇಜ್‌ನಾ...' ಎಂದು ಹೇಳಿದ" ಎಂದೆನ್ನುವ ನಾಗೇಶ್ವರನ್ ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಗನನ್ನ ತುಂಬ ಕಾಳಜಿಯಿಂದ ಬೆಳೆಸಿದ್ದರು. ಹುಡುಗ ಗೆಳೆಯರೊಂದಿಗೆ ವಿಹಾರಕ್ಕೆ ಹೊರಟರೆ ತಂದೆತಾಯಿಗಳಿಬ್ಬರೂ "ನೀರಿಗಿಳಿಯಬೇಡ – ದೂರ ಇರು" ಎಂದು ತಾಕೀತು ಮಾಡಿ ಕಳಿಸುತ್ತಿದ್ದರು. ಹುಡುಗನೂ ಅವರ ಮಾತನ್ನು ಶಿರಸಾವಹಿಸುತ್ತಿದ್ದ. ಈ ಮಾತಿಗೆ ಸಾಕ್ಷಿಯೆಂಬಂತೆ ನಾಗೇಶ್ವರನ್ ನನಗೊಂದು ಫೋಟೋ ತೋರಿಸುತ್ತ, ಹೇಳಿದರು: "ನೋಡಿ, ಇದು ಗೋವಾ ಬೀಚಿನಲ್ಲಿ ತೆಗೆದದ್ದು. ಗೆಳೆಯರೆಲ್ಲ ನೀರಿಗಿಳಿದರೆ ನನ್ನ ಮಗ ದೂರ ದಡದಲ್ಲಿ ಗೆಳೆಯರ ಚಪ್ಪಲಿಗಳನ್ನು ಕಾಯುತ್ತಾ ಕುಳಿತಿದ್ದಾನೆ."

ಅಂದು ಅಕ್ಷಾ ಬೀಚಿಗೆ ಹೋಗುವಾಗಲೂ ತಂದೆ-ತಾಯಿ ಮತ್ತೆ ಮಗನನ್ನು ಎಚ್ಚರಿಸಿದ್ದರು. ಜಯಪುರದಿಂದ ಅಂದು ಬೆಳಿಗ್ಗೆ ಫೋನ್ ಮೂಲಕ ಮಾತನಾಡಿದ ಅವನಣ್ಣ ಕೂಡ ಇದೇ ಮಾತು ಹೇಳಿದ್ದ. "ನನಗೆ ಅಷ್ಟು ತಿಳಿಯೋದಿಲ್ವೆ? ನಾನು ಸರ್ವಥಾ ನೀರಿಗಿಳಿಯುವುದಿಲ್ಲ" ಎಂದು ಹೇಳಿದ್ದ.

ಈಶ್ವರನ್ ಅಂದರೆ ಅದೇ ಕಾಲನಿಯ ಗೆಳೆಯನೊಬ್ಬನ ತಾಯಿಗೆ ತುಂಬ ಅಚ್ಚುಮೆಚ್ಚು. "ಇವತ್ತು ನಮ್ಮ ಮನೆಗೆ ಊಟಕ್ಕೆ ಬಾ" ಎಂದು ಅವರು ಈತನಿಗೆ ದುಂಬಾಲು ಬಿದ್ದಾಗೆಲ್ಲಾ ಈಶ್ವರನ್ ನಕ್ಕು, "ಮರ್‌ನೇಸೆ ಪೆಹಲೆ ಜರೂರ್ ಆಪ್‌ಕೆ ಘರ್‌ಮೇ ಖಾಯೇಂಗೆ ಮಾಂಶಿ" ಎನ್ನುತ್ತಿದ್ದನಂತೆ.

ದುರ್ಘಟನೆ ನಡೆಯುವ ಹಿಂದಿನ ದಿನ ಈಶ್ವರನ್ ಗೆಳೆಯನ ತಾಯಿಯೊಂದಿಗೆ ಹರಟುತ್ತ ಆಕೆ ಬಡಿಸಿದ್ದೆಲ್ಲ ಊಟ ಮಾಡಿ ಆ ತಾಯಿಗೆ ತೃಪ್ತಿ ನೀಡಿದ್ದ.

ಆದರೆ... ಹೊರಟು ಹೋಗಿದ್ದ.

* * *

ಮುಂಬೈಗೆ ದಿನಂಪ್ರತಿ ಲಕ್ಷಾವಧಿ ಜನ ಬೇರೆ ಬೇರೆ ಉದ್ದೇಶಗಳಿಗಾಗಿ ಬರುತ್ತಾರೆ. ಪ್ರವಾಸಕ್ಕೆ ಬರುವವರ ಸಂಖ್ಯೆಯೂ ಹೆಚ್ಚು. ಮುಂಬೈವರೆಗೆ ಬಂದ ಮೇಲೆ ಸಮುದ್ರಕ್ಕೆ ಹೋಗಿ, ಸಮುದ್ರಸ್ನಾನ ಮಾಡದೇ ಬರುವುದುಂಟೇ ಎಂದು ನೀರಿಗಿಳಿಯುವವರೂ ಕಡಿಮೆಯಿಲ್ಲ. ಸಮುದ್ರದ ನೀರಿಗೆ ಬಲಿಯಾಗುವವರಲ್ಲಿ ಇಂಥವರ ಸಂಖ್ಯೆಯೂ ಗಣನೀಯ.

ವಿಹಾರ - ವಿಶ್ರಾಂತಿ

ಹಿಂದೊಮ್ಮೆ ಈ ಮಹಾನಗರದಲ್ಲಿ ಒಂದು ಮೆಡಿಕಲ್' ಕಾನ್‌ಫರೆನ್ಸ್ ನಡೆಯಿತು. ರಾಷ್ಟ್ರೀಯ ಮಟ್ಟದ ಈ ಸಭೆಗೆ ದೇಶದ ಎಲ್ಲೆಡೆಯಿಂದಲೂ ಸಾವಿರಾರು ಜನ ಡಾಕ್ಟರುಗಳು ಬಂದಿದ್ದರು. ಡಾ. ಶ್ರೀಮತಿ ಪ್ರಭು ಎಂಬವರೊಬ್ಬರು ದಿಲ್ಲಿಯಿಂದ ಬಂದವರು ಡಾ. ಚಾವಲಾ ಎಂಬವರ ಮನೆಯಲ್ಲಿ ತಂಗಿದ್ದರು. ಸಮ್ಮೇಳನ ಮುಗಿದ ಮೇಲೆ ಒಂದೆರಡು ದಿನ ಮುಂಬೈಯಲ್ಲೇ ವಿಶ್ರಾಂತಿ ಪಡೆಯುವ ಇಚ್ಛೆಯಿಂದ ಅಲ್ಲಿಯೇ ಉಳಿದರು.

ಶ್ರೀಮತಿ ಪ್ರಭು ಅವರಿಗೆ ಈಜುವುದೆಂದರೆ ತುಂಬ ಅಚ್ಚುಮೆಚ್ಚು. ಸಮುದ್ರದಲ್ಲಿ ಈಜುವ ಅವಕಾಶ ದಿಲ್ಲಿಯಲ್ಲಿ ಸಿಗಬೇಕಲ್ಲಿ? ಡಾ. ಚಾವಲಾ ಸಮುದ್ರ ವಿಹಾರದ ಏರ್ಪಾಟು ಮಾಡಿದರು. ಅವರ ಕುಟುಂಬದ ಸದಸ್ಯರೊಂದಿಗೆ ಶ್ರೀಮತಿ ಪ್ರಭು ಅಕ್ಷಾ ಬೀಚಿಗೆ ಹೋದರು.



ಇನ್ನೂ ಬದುಕಲು ಸಾಧ್ಯವೆಂದೆನಿಸಿದರೆ ಮಾಲೀಸು ಮಾಡಿ ಆಸ್ಪತ್ರೆಗೆ ಸಾಗಿಸುತ್ತಾರೆ.

ಸ್ನಾನ ಮುಗಿಸಿ, ದಡದಲ್ಲಿ ಕುಳಿತು ತಂದ ತಿಂಡಿ ತಿಂದು ಮುಗಿಸಿ ಮನೆಯೆಡೆ ಸಾಗಬೇಕು. ಆದರೆ ಶ್ರೀಮತಿ ಸಮುದ್ರದಲ್ಲಿ ಸ್ವಲ್ಪ ದೂರಕ್ಕೆ ಈಜಿ ಹೋದರು. ಅವರ ಹಿಂದೆಯೇ ಡಾ. ಚಾವಲಾ ಈಜಿದರು. ಇವರಿಬ್ಬರನ್ನು ಅನುಸರಿಸಿದಾತ ಡಾ. ಚಾವಲಾರ ತರುಣ ಮಗ ಇಂಜಿನಿಯರಿಂಗ್ ವಿದ್ಯಾರ್ಥಿ.

ಈಜುತ್ತ ಹೋದವರನ್ನು ಸಮುದ್ರ ರಾಜ ಹಾಗೆಯೇ ಬಿಡಲಿಲ್ಲ. ಹಿಪ್ಪೆ ಮಾಡಿಬಿಟ್ಟ. ಜಗಿದು ಉಗುಳಿದ ಸಿಪ್ಪೆಯಂತಾದರು ಆ ಮೂವರು. ದಡದ ಮೇಲಿದ್ದವರ ಆರ್ತನಾದ ಕೇಳಿ ಜೀವರಕ್ಷಕ ದಳದವರು ನೀರಿಗಿಳಿದು ಈಜಿ ಹೆಣಗಳನ್ನೆಳೆದು ತಂದು ದಡ ಸೇರಿಸಬೇಕಾಯಿತು.

ಒಂದು ಆಂಗ್ಲ ಪತ್ರಿಕೆಯ ಅಂದಾಜಿನ ಪ್ರಕಾರ ಮುಂಬೈ ಮಹಾನಗರವೊಂದರಲ್ಲಿಯೇ ವರ್ಷಕ್ಕೆ ಹೀಗೆ ಸಮುದ್ರ ಪಾಲಾಗುವವರು ಮತ್ತು ಬೇರೆ ರೀತಿಯಲ್ಲಿ ಮುಳುಗುವವರು 120 ಜನ. ಆದರೆ ಜೀವರಕ್ಷಕರು ಇಟ್ಟಿರುವ ಲೆಕ್ಕ ತೋರಿಸುವ ಅಂಕಿ ಸಂಖ್ಯೆಗಳೇ ಬೇರೆ.



ಜೀವರಕ್ಷಕರು ಈಜುವವರನ್ನು ವೀಕ್ಷಿಸುತ್ತಿರುವುದು.

ಹಿಂದಿನಿಂದಲೂ ಈ ರೀತಿಯ ದುರ್ಮರಣಗಳು ಸಮುದ್ರ ಸ್ನಾನಕ್ಕೆಂದು ಬಂದವರಲ್ಲಿ ಸಂಭವಿಸುತ್ತವೆ ಎಂದು ಅರಿತು, ಇದನ್ನು ತಡೆಗಟ್ಟುವದೆಂತು ಎಂದು ಮುಂಬೈ ಮುನ್‌ಸಿಪಲ್ ಕಾರ್ಪೊರೇಶನ್ ಯೋಚಿಸತೊಡಗಿತು. ಅದರ ಪರಿಣಾಮವಾಗಿ 1968ರಲ್ಲಿ ಜೀವರಕ್ಷಕರನ್ನು ನಿಯಮಿಸಲಾಯಿತು. ಈ ಜನರು ಒಳ್ಳೇ ಈಜು ಬಲ್ಲವರು. ಅದರಲ್ಲಿ ಪರಿಣತರು, ದೃಢಕಾಯದವರು, ಧೈರ್ಯಶಾಲಿಗಳು ಮಾತ್ರ ಜೀವರಕ್ಷಕರಾಗಿ ಇರಬೇಕೆಂದು ಕಾಯದೆ, ಚೆನ್ನಾಗಿ ಈಜು ಬಲ್ಲವರನ್ನು ಈ ಕಾರ್ಯಕ್ಕೆ ಆರಿಸಲಾಗುತ್ತದೆ. ಅಂದರೆ, ಈಜುವುದರಲ್ಲಿ ಚಾಂಪಿಯನ್ ಇದ್ದವರನ್ನು ಆರಿಸುತ್ತಾರೆ.

ಕಣ್ಣಲ್ಲಿ ಎಣ್ಣೆ

ಇವರು ಯಾವಾಗಲೂ ಸಮುದ್ರ ತೀರದಲ್ಲಿದ್ದು, ಈಜುವ ಜನರನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯಬೇಕು. ಎಲ್ಲಿಂದಲೂ ಆರ್ತದನಿ ಕೇಳಿತೊ ಇವರು ಧಾವಿಸಬೇಕು. ಉಳಿದ ಸಹಕಾರಿಗಳನ್ನು ಕೂಗಬೇಕು. ಈ ರಕ್ಷಕರ ಮುಖ್ಯ ತಾಣ ಜುಹೂಬೀಚು. ಅಲ್ಲಿಯೇ ಸ್ಥಳೀಯ ಲಯನ್ಸ್ ಕ್ಲಬ್ಬಿನಿಂದ ಇವರಿಗೊಂದು ಪೋಲಿಯ ವ್ಯವಸ್ಥೆ ಇದೆ. ಟೆಲಿಫೋನಿನ ಅನುಕೂಲತೆಯಿದೆ. 1968ರ ಮೊದಲು ಮಾತ್ರ ಸೇಫ್ಟೀ ಫಸ್ಟ್ ಸೊಸೈಟಿ ಆಫ್ ಇಂಡಿಯಾ ಈ ವಿಷಯದಲ್ಲಿ ಅಲ್ಪಸ್ವಲ್ಪ ಸಹಾಯ ಮಾಡುತ್ತಿದ್ದರಂತೆ.

ರಕ್ಷಕರ ಕಾರ್ಯರಂಗಕ್ಕೆ ತೀವ್ರತೆ ಬರಲಿ, ಅನುಕೂಲವಾಗಲಿ ಎಂದು ಜುಹೂ ಬೀಚಿನ ಅಂಚಿನಲ್ಲಿ ನಾಲ್ಕು ಸಿಮೆಂಟಿನ ವಾಚ್ ಟವರ್ ಕಟ್ಟಿದ್ದಾರೆ. ಅಂದರೆ ಇವುಗಳ ಮೇಲೆ ನಿಂತು ದುರ್ಬಿನ್ನಿನ ಸಹಾಯದಿಂದ ನೋಡಿದರೆ, ದೂರದಲ್ಲಿ ಸಂಕಟಕ್ಕೆ ಸಿಕ್ಕವರನ್ನು ಕಾಣಲು ಅನುಕೂಲವಾಗಲಿ ಎಂದು. ಆದರೆ, ದುರ್ದೈವದಿಂದ ಇಂದು ಒಂದಾದರೂ ವಾಚ್‌ಟವರ್ ಸುಸ್ಥಿತಿಯಲ್ಲಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಕಟ್ಟುವಾಗಿನ ಹುಮ್ಮಸ್ಸು ಇಂದು ಕಾರ್ಪೊರೇಶನ್‌ಗೆ ಇಲ್ಲವೆಂದು ಹೇಳಬೇಕು.

ಅದೇ ರೀತಿ ಇನ್ನು 'ಬೇಕು' ಎಂಬ ಸಲಕರಣೆಗಳು ಈ ರಕ್ಷಕರಲ್ಲಿಲ್ಲವೆಂಬುದು ದುರ್ದೈವದ ಸಂಗತಿ! ಆದರೂ ಇದ್ದುದರಲ್ಲಿಯೇ ಬಹು ತೊಂದರೆ ತೆಗೆದುಕೊಂಡು ಸಂಕಟಕ್ಕೀಡಾದವರನ್ನು ಬದುಕಿಸಲು ಪ್ರಯತ್ನಿಸುತ್ತಾರೆ ಇವರು.

ಇದ್ದ ರಕ್ಷಕರೆಲ್ಲ ಜುಹೂದಲ್ಲಿಯೇ ಇರುವುದಿಲ್ಲ. ರಜೆಯ ದಿನಗಳಲ್ಲಿ ಇವರನ್ನು ತಂಡತಂಡವಾಗಿ ಬೇರೆ ಬೇರೆ ಬೀಚುಗಳಿಗೆ ಕಳಿಸುತ್ತಾರೆ. ಇನ್ನು ಕೆಲವರನ್ನು 'ಸ್ವಿಮಿಂಗ್ ಪೂಲ್'ಗಳಿಗೂ ಕಳಿಸುತ್ತಾರೆ.

ಜುಹೂ ಅಂತಹ ಸ್ಥಳದಲ್ಲಿ ಒಂದು 'ಸ್ಪೀಡ್‌ಬೋಟ್' ತಮ್ಮ ಬಳಿ ಇದ್ದರೆ ಒಳಿತು ಎಂಬುದು ಇವರ ಕೊರಗು. ಅಂದರೆ ದೂರದಲ್ಲಿ ಸಂಕಟದಲ್ಲಿ ಸಿಕ್ಕವರನ್ನು ಬೇಗ. ದಂಡೆಗೆ ತರಲೂ, ಅಂಥವರನ್ನು ಹುಡುಕಲೂ ಅನುಕೂಲ ಎನ್ನುತ್ತಾರೆ ಈ ರಕ್ಷಕರು.

ಸದ್ಯದ ಅವರ ಸಂಬಳದ ಶ್ರೇಣಿಯಿಂದ ಅವರು ತೃಪ್ತರಲ್ಲ. ಕಾರಕೂನರ ಪಗಾರ ಸಿಗುತ್ತದೆ ಅವರಿಗೆ. ಮುನ್‌ಸಿಪಲ್ ಕಾರ್ಪೋರೇಶನ್‌ನದೇ ಆದ ಫಯರ್ ಬ್ರಿಗೇಡಿನವರಿಗೆ ಇನ್‌ಶೂರೆನ್ಸ್ ಸೌಲಭ್ಯ ಇದೆಯಂತೆ. ಆ ಸೌಲಭ್ಯ ಇವರಿಗಿಲ್ಲ. ಅವರಿಗಿದ್ದ ವಸತಿ ಅನುಕೂಲತೆಯೂ ಇವರಿಗಿಲ್ಲ. ಅವರಿಗಿಂತ ನಮ್ಮ ಕಾರ್ಯದಲ್ಲಿ ರಿಸ್ಕ್ ಕಡಿಮೆ ಇದೆಯೇ? ಎಂಬುದು ಇವರ ಪ್ರಶ್ನೆ. ಇನ್‌ಶೂರೆನ್ಸ್ ಅಲ್ಲದೆ ಫಾಯರ್ ಜನರಿಗೆ ರಿಸ್ಕ್ ಅಲೋವೆನ್ಸ್ ಕೂಡ ಉಂಟಂತೆ.

ಬೆಳಗಿನ ಆರು ಗಂಟೆಗೆ ಇವರ ಕಾರ್ಯ ಪ್ರಾರಂಭ. ಆರರಿಂದ ಎರಡು ಗಂಟೆ ಮಧ್ಯಾಹ್ನ ಹಾಗೂ ಹತ್ತು ಘಂಟೆಯಿಂದ ಸಾಯಂಕಾಲ ಆರರ ವರೆಗೆ ಇವರ ಡ್ಯೂಟಿ. ಹೀಗೆ ಎರಡು ಭಾಗಗಳಲ್ಲಿ !

ಈ ಎಲ್ಲ ಕೊರತೆಯುಲ್ಲೂ ಅವರು ತಮ್ಮ ಕರ್ತವ್ಯವನ್ನು ಮನಃಪೂರ್ವಕವಾಗಿ ನೆರವೇರಿಸುತ್ತಾರೆಂದು ಹೇಳಬೇಕು. ಅವರಲ್ಲೊಂದು ರಿಜಿಸ್ಟರ್ ಇದೆ. ಅದರಲ್ಲಿ ಅಪಘಾತದ ವಿವರಗಳನ್ನು ನೊಂದಾಯಿಸಿಟ್ಟಿದ್ದಾರೆ.

ಮುಳುಗುತ್ತಿರುವ ವ್ಯಕ್ತಿಯನ್ನು ಹೊರತೆಗೆದಾಗ ಇನ್ನೂ ಜೀವವಿದೆ, ಬದುಕಬಹುದು ಎಂದಾದರೆ – ತತ್‌ಕ್ಷಣ ಹಾಸ್ಪಿಟಲ್‌ಗೆ ಸಾಗಿಸುವರಂತೆ. ಮರಣ ಹೊಂದಿದ್ದೆಂದು ಖಾತ್ರಿಯಾದರೆ ಅದು ಮುಂದೆ ಪೊಲೀಸರ ಕೈಗೆ ಹೋಗುತ್ತದೆ. ಸಂಕಟದಲ್ಲಿ ಸಿಕ್ಕವರನ್ನು ಹೇಗೆ ತರುವದು. ನೀರು ಕುಡಿದಿದ್ದರೆ ಹೇಗೆ ಹೊರತೆಗೆಯುವುದು ಮುಂತಾದ್ದನ್ನೆಲ್ಲ ಇವರಿಗೆ ತರಬೇತಿ ಕೊಡಲಾಗುತ್ತದೆ.

ಜೀವರಕ್ಷಕರ ಅನುಭವದ ಮೇರೆಗೆ ಕೆಲವರು ಈ ತಾಣವನ್ನು ಆತ್ಮಹತ್ಯೆಗೂ ಉಪಯೋಗಿಸಲು ಪ್ರಯತ್ನಿಸುತ್ತಾರೆ. ಅಂತಹವರು ಇವರ ಕಣ್ಣು ತಪ್ಪಿಸಿಯೇ ನೀರಿಗಿಳಿಯಬಹುದು. ಆತ್ಮಹತ್ಯೆಯ ಸಂದರ್ಭ ನೆನಪಾದರೆ 'ಕುರುಪ್' ಕುಟುಂಬದ ಜ್ಞಾಪಕವಾಗುವದು ಸಹಜ! 'ಕುರುಪ್'ರು ಒಂದು ಹಿರಿಯ ಕಂಪೆನಿಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು. ಆರ್ಥಿಕ ತೊಂದರೆಯೋ ಮತ್ತೇನೊ ಕಾರಣದಿಂದ ಮನೆಯವರೆಲ್ಲರೂ ಮರಣವನ್ನಪ್ಪಲು ತಂದೆ-ತಾಯಿ ನಿರ್ಧರಿಸಿದರು. ಈ ಕಾರ್ಯಕ್ಕೆ ಜುಹು ಬೀಚನ್ನೇ ಆರಿಸಿದರು. ಮಕ್ಕಳಿಗೆ ಸಮುದ್ರದಲ್ಲಿ ಸಾಯಂಕಾಲ ತಿರುಗಾಡಲು ಹೊರಗೆ ಹೋಗೋಣವೆಂದರು. ಆ ಮೊದಲು ಊಟವನ್ನು ಹೊಟೇಲ್ ಒಂದರಲ್ಲಿ ಮುಗಿಸಿದರು. ಮಕ್ಕಳನ್ನೆಲ್ಲ ನಗಿಸುತ್ತ ನಲಿಸುತ್ತ ಸಮುದ್ರ ದಂಡೆಗೆ ಕರೆದೊಯ್ದರು. ಮಕ್ಕಳೊಂದಿಗೇ ಆತ್ಮಹತ್ಯೆಗೆ ಅಣಿಯಾದ ತಂದೆತಾಯಿಗಳಿಗೆ ಆ ಗಳಿಗೆಯಲ್ಲಿ ಮನಸ್ಸಿನಲ್ಲಿ ಏನೇನೋ ಅನಿಸುತ್ತಿತ್ತೋ, ನಡಿರಿ ನೀರು ತಂಪಾಗಿದೆ, ಇನ್ನಷ್ಟು ಮುಂದಕ್ಕೆ ಹೋಗೋಣವೆಂದರು. ಕರೆದುಕೊಂಡು ಹೊರಟರು. ಮುಂದೆ ಹೋದಂತೆ ಹಿರಿಯ ಹುಡುಗಿಯೊಂದು ತಪ್ಪಿಸಿಕೊಂಡು ಜೀವಂತ ಉಳಿಯಿತು. ಈ ದುರ್ಘಟನೆಯ ಕತೆ ಹೇಳಲು – ಉಳಿದವರ ಹೆಣ ಸಿಕ್ಕದ್ದು ಮರುದಿನ ಬೆಳಗ್ಗೆಯೇ...

ಪ್ರಮಾದವೇನೂ ಅಲ್ಲ

ಸಮುದ್ರ ಸ್ನಾನಕ್ಕೆ ಹೋದವರೆಲ್ಲರೂ ಮುಳುಗಿಯೇ ಬಿಡುತ್ತಾರೆಯೇ? ಎಂದು ಯಾರೂ ಕೇಳಬಹುದು. ನಿಜ' ಸಮುದ್ರ ಸ್ನಾನಕ್ಕೆ ಹೋಗುವದು ಪ್ರಮಾದವೇನೂ ಅಲ್ಲ. ಆದರೆ ಸಮುದ್ರಕ್ಕೆ ಆಗಲಿ, ಸರೋವರದಲ್ಲಿಯೇ ಆಗಲಿ, ನದಿಯಲ್ಲೇ ಆಗಲಿ, ಮೀಯಲು ಹೋಗುವಾಗ ಅಲ್ಲಿಯ ಸುರಕ್ಷತೆಯ ಬಗ್ಗೆ ತಿಳಿದು ಆ ಕಾರ್ಯ ಕೈಗೊಳ್ಳುವದು ಒಳಿತು. ಗುಂಪುಗಳು, ಸಂಘಸಂಸ್ಥೆಗಳು ಶಾಲೆ ಕಾಲೇಜಿನವರು, ಇಂಥ ಹೊರಕೂಟಗಳನ್ನು ಏರ್ಪಡಿಸುವಾಗ ಆ ಕೂಟಗಳ ಜವಾಬ್ದಾರಿ ಹೊತ್ತ ಜನ ಈ ಜಾಗರೂಕತೆಯನ್ನು ತೆಗೆದುಕೊಳ್ಳಲೇಬೇಕು. ಸಮುದ್ರಸ್ನಾನಕ್ಕೆಂದೇ ಹೊರಟರೆ ಆಯಾ ಸ್ಥಳದಲ್ಲಿಯ ಜೀವರಕ್ಷಕರನ್ನು ಮೊದಲೇ ಕಂಡು, ಸಂಕಟದ ಸ್ಥಳಗಳ ಬಗ್ಗೆ ವಿಚಾರಿಸಿ, ಅವರ ಸಹಕಾರವನ್ನು ಕೋರಿ ಇಂಥ ಕೂಟಗಳನ್ನು ಯೋಜಿಸುವದು ಕ್ಷೇಮಕರವಾದೀತು ಅಲ್ಲವೆ?

ಈ ಲೇಖನ ಮುಂಬೈಯಲ್ಲಿ ನಡೆದ ಘಟನೆಗಳನ್ನು ಆಧರಿಸಿ ಸಿದ್ಧಪಡಿಸಿದ್ದಾಗಿದೆ. ಇಂಥ ದುರ್ಘಟನೆಗಳು ಎಲ್ಲೂ ನಡೆಯಬಹುದು. ಅವರು ಮೇಲಿನ ಸುರಕ್ಷೆಯ ಉದ್ದೇಶವನ್ನು ಯೋಜಿಸುವದು ಹಿತಕರವಲ್ಲವೆ? *

ಕ್ಷ - ಕಿರಣ
ರಂಗ

'ರೇಣುಕಾ ವೈಭವ ಕೋ-ಆಪರೇಟಿವ್ ಸೊಸೈಟಿ'

ದಾರಿ ತಪ್ಪಿದವರಿಗೊಂದು ದಾರಿದೀಪ

ತಮ್ಮ ದಂಧೆ ಬಿಟ್ಟು ಸಣ್ಣ ಪುಟ್ಟ ವ್ಯಾಪಾರದಲ್ಲೋ ಇನ್ನಿತರ ಕಸುಬಿನಲ್ಲೋ ನೆಲೆ ನಿಲ್ಲುವಂತಹ ವೇಶ್ಯೆಯರಿಗೆ ಆರ್ಥಿಕ ಸಹಾಯವನ್ನು ನೀಡಲು ಪುಣೆಯಲ್ಲಿ ಒಂದು ಕೋ - ಆಪರೇಟಿವ್ ಸೊಸೈಟಿ ಅಸ್ತಿತ್ವಕ್ಕೆ ಬಂದಿದೆ. ಈ 'ರೇಣುಕಾ ವೈಭವ ಕೋ - ಆಪರೇಟಿವ್ ಸೊಸೈಟಿ'ಯನ್ನು ರಚಿಸಿದವರು ಸಮಾಜ ಸೇವಕಿ ಶಾಲಿನಿ ಬ್ಯಾ ಕುರಡೆ ಅವರು.

ಮುಂಬಯಿಯಲ್ಲಿ ಫರಾಸ್‌ರೋಡ್ ಇದ್ದಂತೆ ಪುಣೆಯಲ್ಲಿ ಶುಕ್ರವಾರ ಪೇಟೆ. ಇಲ್ಲಿಯ ಜನಸಂಖ್ಯೆ ಸುಮಾರು ಎಂಟು ಸಾವಿರ. ಅದರಲ್ಲಿ 4,500 ಜನ ವೇಶ್ಯೆಯರು. ಇವರನ್ನೆಲ್ಲಾ ಒಂದುಗೂಡಿಸಿ ಬದುಕು ಹಸನಾಗಿಸಲು, ಸಹ್ಯವನ್ನಾಗಿ ಮಾಡಲು ಅದೇ ಪ್ರದೇಶದ ಸಮಾಜ ಸೇವಿಕೆ ಶಾಲಿನಿ ಬ್ಯಾ ಕುರಡೆ ವೇಶ್ಯೆಯರಿಗಾಗಿ ಕೋ -ಆಪರೇಟಿವ್ ಸೊಸೈಟಿ ಒಂದನ್ನು ಸ್ಥಾಪಿಸಿದ್ದಾರೆ. 'ರೇಣುಕಾ ವೈಭವ ಕೋ-ಆಪರೇಟಿವ್ ಸೊಸೈಟಿ' ಎಂದು ಅದರ ಹೆಸರು. 1985ರ ಆಗಸ್ಟ್ ಒಂದರಂದು ಇದನ್ನು ರಿಜಿಸ್ಟರ್ ಮಾಡಲಾಯಿತು. ಈಗ ಇದರಲ್ಲಿ 230 ಜನ ಸದಸ್ಯರು 10,760 ರೂ. ಬಂಡವಾಳ ತೊಡಗಿಸಿದ್ದಾರೆ.

ಶುಕ್ರವಾರ ಪೇಟೆಯಲ್ಲಿ ನಾಲ್ಕು ವಿಧಗಳ ಹೆಂಗಸರಿದ್ದಾರೆ.

1. **ಬಡತನದಿಂದ ಅಥವಾ ಒತ್ತಾಯ ಪೂರ್ವಕವಾಗಿ ಸೂಳೆಗಾರಿಕೆಗೆ ತಳ್ಳಲ್ಪಟ್ಟವರು (80%)**
2. **ಗಂಡಂದಿರಿಂದ ನ್ಯಾಯಬಾಹಿರವಾಗಿ ತ್ಯಜಿಸಲ್ಪಟ್ಟು ಬೀದಿಯಲ್ಲಿ ಬಿದ್ದವರು (12%)**
3. **ಪಟ್ಟಣದ ಬೆಡಗು ಬಿನ್ನಾಣಗಳಿಂದ ಆಕರ್ಷಿಸಲ್ಪಟ್ಟು ಹಳ್ಳಿಗಳಿಂದ ಓಡಿ ಬಂದವರು (6%)**
4. **ತಲೆಹಿಡುಕರಿಂದ ಅಲ್ಲಿಗೆ ಸೇರಿಸಲ್ಪಟ್ಟವರು (2%)**

ಪದವೀಧರೆಯಾದ ಶಾಲಿನಿಬ್ಯಾ ಸೂಳೆಗಾರಿಕೆ ನಡೆಯುವ ಶುಕ್ರವಾರಪೇಟೆ. ಅದರಲ್ಲೂ ದಾನೆಯಾಲ್ಲಿ ಗಲ್ಲಿಯಲ್ಲಿ ವೇಶ್ಯೆಯರ ಮೇಲೆ ನಡೆಯುವ ಕ್ರೌರ್ಯ, ಹಿಂಸೆ, ಹಾಗೂ ಸುಲಿಗೆಗಳನ್ನು ಹತ್ತಿರದಿಂದ ಕಂಡವರು. ವೇಶ್ಯೆಯರಿಗೆ ಮತ್ತು ಗರ್‌ವಾಲಿಗಳಿಗೆ ದಿನನಿತ್ಯ ನಡೆಯುವ ಜಗಳಗಳನ್ನು ಕಾಣುತ್ತಿದ್ದವರು. ಪೊಲೀಸರಿಂದ, ತಲೆ ಹಿಡುಕರಿಂದ ಒದಗುವ ಕಿರುಕುಳ, ರಾಜಕಾರಣಿಗಳ ಗೋಸುಂಬೆತನ ಅವರಿಗೆ ಮನದಟ್ಟಾಗಿತ್ತು. ನಾಲ್ಕು ವರ್ಷಗಳ ಕೆಳಗೆ ಅಲ್ಲಿ ನಡೆದ ದೊಂಬಿಯೊಂದರಿಂದ ವೇಶ್ಯೆಯರ ಜೀವನ ಎಷ್ಟು ಕಷ್ಟತರದ್ದೆಂದು ಶಾಲಿನಿ ಬ್ಯಾ ಅರಿತುಕೊಂಡರು. ಆಗಲೇ ಅವರು ಕೋ - ಆಪರೇಟಿವ್ ಸೊಸೈಟಿ ಮಾಡುವ ನಿರ್ಧಾರ ಕೈಗೊಂಡದ್ದು. ಅವರ ಪ್ರಭಾವ ಶಾಲಿ ಮಿತ್ರರೂ ಸಮಾಜ ಸೇವಕರೂ ಆದ ಚಂದ್ರಕಾಂತ್ ಮತ್ತು ಮೊಹಮ್ಮದ್ ಮಾಮ ಶಾಲಿನಿಬ್ಯಾಯವರಿಗೆ ನೆರವಾದರು.

ಕಷ್ಟದ ಕೆಲಸ

ಕೋ - ಆಪರೇಟಿವ್ ಸೊಸೈಟಿ ರಚನೆಗೆ 500 ಸದಸ್ಯರ ಆವಶ್ಯಕತೆ ಇದೆ. ಹಿಂದುಳಿದ ವರ್ಗಗಳ ಸೊಸೈಟಿ ಎಂಬ ನೆಲೆಯಲ್ಲಿ 250 ಮಂದಿ ಸದಸ್ಯರಿದ್ದರೆ ಸಾಕು ಎನ್ನುವ ರಿಯಾಯತಿ ತೋರಿಸಿದವರು ಕೋ - ಆಪರೇಟಿವ್ ಸೊಸೈಟಿಗಳ ಡಿಪ್ಯುಟಿ ರಿಜಿಸ್ಟ್ರಾರ್ ಸುಧೀರ್ ಥ್ಯಾಕರೆ. ಆದರೂ ಸದಸ್ಯರನ್ನು ಕೂಡಿ ಹಾಕುವುದು ಸುಲಭದ ಮಾತಾಗಿರಲಿಲ್ಲ. ಶಾಲಿನಿ ಬ್ಯಾಯ ಓಡಾಟ ಸಾಹುಕಾರರ, ಸ್ಥಾಪಿತ ಹಿತಾಸಕ್ತಿಗಳ ಗಮನ ಸೆಳೆಯಿತು. ಅವರು ಗರ್‌ವಾಲಿಗಳನ್ನು ತಮ್ಮೆಲ್ಲಾ ಬಾಕಿಯನ್ನು ತೀರಿಸುವಂತೆ ಒತ್ತಾಯಿಸಲು ಆರಂಭಿಸಿದರು.

ಕೊನೆಗೂ 'ರೇಣುಕಾ ವೈಭವ ಕೋ - ಆಪರೇ
ಬಂತು. ಪ್ರತಿಯೋರ್ವ ಸದಸ್ಯೆ ಕಡಿಮೆ ಪಕ್ಷ ಹತ್ತು
ಪಡೆಯಬೇಕು. ಒಂದು ರೂ. ಸದಸ್ಯತನದ ಶುಲ್ಕ.

ಸದಸ್ಯತನಕ್ಕೆ ಅರ್ಹತೆಗಳನ್ನು ಹೀಗೆ ಪಟ್ಟಿ ಮಾ

1. ಹೆಂಗಸು 18 ವರ್ಷ ಮೀರಿದವಳಿರಬೇಕು.
2. ಆಕೆ ಪುಣೆ ಮುನ್ಸಿಪಲ್ ಕಾರ್ಪೊರೇಶನ್‌ನಿನ 4
ಪೇಟೆ)ನಲ್ಲಿ ವಾಸಿಸುತ್ತಿರಬೇಕು.
3. ಸದಸ್ಯರು ಹನ್ನೊಂದು ಜನ ಡೈರೆಕ್ಟರನ್ನು ಆರಿ
4. ಬೋರ್ಡ್ ಆಫ್ ಡೈರೆಕ್ಟರ್ ಸರ್ವ ಸದಸ್ಯ
ಒಪ್ಪಿಸುವರು.
5. ಅಪ್ರಾಯಸ್ಥ ಹುಡುಗಿಯು ಅಥವಾ ಬೇನಾಮಿ
ವಂತಿಲ್ಲ.

ಡೈರೆಕ್ಟರುಗಳಲ್ಲಿ ಹೆಚ್ಚಿನವರು ಗರ್‌ವಾಲಿಗಳು.
4,500 ಜನ ವೇಶ್ಯೆಯರಲ್ಲಿ 2,000 ಜನರನ್ನಾದರೂ
ಹಂಬಲ ಶಾಲಿನಿಬ್ಯಾ ಅವರದ್ದು.

ಸೊಸೈಟಿ ಏನು ಮಾಡುತ್ತದೆ?

ಪ್ರಾಯಸ್ಥ ವೇಶ್ಯೆಯರನ್ನು ಸಣ್ಣಪುಟ್ಟ ವ್ಯಾ
ಅದಕ್ಕೆ ಬೇಕಾದ ಬಂಡವಾಳಗಳನ್ನು ಸೊಸೈಟಿ ಒದ
ಆಪರೇಟಿವ್ ಸೊಸೈಟಿ ಸ್ಥಾಪಿಸುವುದು. 'ರೇಣುಕಾ
ಸೊಸೈಟಿ'ಯ ಮೂಲ ಧ್ಯೇಯ. ಪಾನ್‌ಬೀಡ ಮಾರುವ
ಮಾರುವ ಗೂಡಂಗಡಿಗಳನ್ನು ನಡೆಸುವ ಇಚ್ಛೆಉಳ್ಳ
ಸಾಲ ನೀಡುವುದು. ಹಾಗೆಯೇ ಉಪ್ಪಿನಕಾಯಿ,
ಪ್ರಸಾಧನ ಸಾಮಗ್ರಿಗಳ ಅಂಗಡಿಗಳನ್ನು ಸೊಸೈಟಿಯೇ
ಸುತ್ತಿದೆ.

ಸೊಸೈಟಿಯಿಂದ ಎಲ್ಲ ವೇಶ್ಯೆಯರ ಪುನರ್ವಸತಿ ಅ
ಶೇಕಡಾ ಎರಡರಷ್ಟು ಜನ ತಮ್ಮ ದಂಧೆ ಬಿಟ್ಟು ಬೇ
ಸಾರ್ಥಕ ಎನ್ನುತ್ತಾರೆ ಶಾಲಿನಿಬ್ಯಾ.

ಬ್ಯಾಂಕಿನ ಸಹಾಯ ಹಸ್ತ

ಪುಣೆಯ ಜಿಲ್ಲಾ ಸಹಕಾರಿ ಕೋ - ಆಪರೇಟಿ
ರೂ.ಗಳ ಸಾಲ ನೀಡುವುದಕ್ಕೆ ಮುಂದೆ ಬಂದಿದೆ. ಸ
ಮೊದಲು ನಿರ್ಧರಿಸಿ ಪಾನ್ ಅಂಗಡಿ ಯಾ ಸ್ವಂತ
ಅವರಿಗೆ ಮೊದಲ ಪ್ರಾಶಸ್ತ್ಯ ನೀಡುವ ಹಂಬಲ
12ರ ಬಡ್ಡಿಯಲ್ಲಿ ಪ್ರತಿಯೊಂದು ಅರ್ಜಿಗೂ 1000
ಪ್ರಯತ್ನ ನಡೆಯುತ್ತಿದೆ. ಒಂದು ವರ್ಷದ ಅವಧಿಯ
ಬೇಕು. ಸಾಲ ನೀಡುವಾಗಲೇ 100 ರೂ. ಮುರಿದಿಟ್ಟು
10 ರೂ.ಗಳ ಒಂಬತ್ತು ಶೇರುಗಳನ್ನಾಗಿ ಪರಿವರ್ತಿಸಿ,
ಮತ್ತು ಒಂಬತ್ತು ರೂ. ನಿರ್ವಹಣಾ ವೆಚ್ಚ ಎಂದು
ಸಂಗ್ರಹಿಸಿದ ಮೊತ್ತವೇ 9000 ರೂ.ಗಳಾಗುತ್ತವೆ.

ಹಿಂದೆ ಡಾ. ಕೊಟ್ನಿಸ್ ಆಸ್ಪತ್ರೆಯಲ್ಲಿ ಪ್ರತಿಯೊ
ಪತ್ರವನ್ನು ನೀಡಿ ಕ್ರಮಬದ್ಧವಾಗಿ ಮೆಡಿಕಲ್ ಚೆಕ್
1983ರಲ್ಲಿ ಮುನ್ಸಿಪಾಲಟಿ ವೇಶ್ಯಾವಾಟಿಕೆಗೆ ಪ್ರೊ
ಕೂಗೆದ್ದುದರಿಂದ ಈ ವ್ಯವಸ್ಥೆಯನ್ನು ನಿಲ್ಲಿಸಲಾಯಿ
ಆ ಕೆಲಸವನ್ನು ಕೈಗೆತ್ತಿಕೊಂಡಿದೆ.

ರೇಣುಕಾ ವೈಭವ ಕೋ - ಆಪರೇಟಿವ್ ಸೊಸ
ರೈಡ್ ಕಡಿಮೆ ಆಗಿದೆ. ಹುಡುಗಿಯರ ದೇಹ ಮತ್ತು
ವಂತೆ ನೋಡಿಕೊಳ್ಳಲಾಗುವುದು.

ಅದೃಷ್ಟವಶಾತ್ 'ರೇಣುಕಾ ವೈಭವ ಕೋ - ಆಪ
ಅಗರ್‌ವಾಲ್ ಟ್ರಸ್ಟ್ ಮತ್ತು ದಾದೂ ಹಲ್ವೈ ಗ
ಟ್ರಸ್ಟ್‌ಗಳು ಆಸ್ಥೆ ತೋರಿಸಿವೆ. ಇವು ಐದು ಲಕ್ಷ ರೂ.ಗ
ಅದರ ಹತ್ತರಷ್ಟು ಶೆಡ್ಯೂಲ್ ಬ್ಯಾಂಕ್‌ಗಳು ಸಾಲ ನ
ಆಗ ಸೊಸೈಟಿಯ ಬಂಡವಾಳ ಜಾಸ್ತಿ ಆಗಿ ಎಲ್ಲರಿಗೂ
ಅನುಕೂಲವಾಗಬಹುದೆಂದು ಶಾಲಿನಿ ಬ್ಯಾ ಅವರ ಕನಸು